ಮಾಗಿದವನಂತೆ ಕಂಡ.

“ನೋಡು, ನಾನು ಹೇಳೋದು ನಿನಗೆ ಖರೆ ಅಂತ ಕಾಣಲಿಕ್ಕಿಲ್ಲ. ಒಂದು ಕಾಲದಲ್ಲಿ... ಒಂದು ಕಾಲದಲ್ಲಿ ಏಕೆ, ಈಗಲೂ ಆಗಾಗ ನನಗೂ ನಿನ್ನ ಸಮಸ್ಯೆ ಕಾಡುವುದುಂಟು. ನಿನ್ನ ಒಳಗಿರುವ ಮನುಷ್ಯನಿಗೆ ಗಾಯ ಆಗಿದೆ. ಯಾಕೆ ಅಂತ ನನಗೂ ತಿಳಿದಿಲ್ಲ. ಅದಕ್ಕೆ ಕಾರಣ ಒಂದೇ ಇರಬೇಕೆಂತಲೂ ಇಲ್ಲ. ಈಗ ನೀನು ಮಾಡಬೇಕಾದ ಒಂದೆ ಉಪಾಯವೆಂದರೆ ಏನೂ ಮಾಡದಿರುವುದು. ಇದು ಏನಾದರೂ ಮಾಡುವುದಕ್ಕಿಂತ ಕಷ್ಟ ಅಂತ ಗೊತ್ತು. ನಿನ್ನ ಮೇಲೆ ನಿನಗೆ ನಂಬಿಕೆ ಬರುವವರೆಗೆ ಆಫೀಸಿಗೆ ಹೋಗಬೇಡ, ಯಾರಲ್ಲೂ ಹೆಚ್ಚು ಮಾತಾಡಲು ಹೋಗಬೇಡ. ನಿನ್ನ ಒಳಗಾಯಗಳನ್ನು ಹೊರಗೆ ತೋರಿಸುತ್ತ ಹೋದರೆ ಜನ ಭೂತ ಮೆಟ್ಟಿದವರಂತೆ ಗಾಬರಿಬೀಳುತ್ತಾರೆ, ಅಷ್ಟೆ.”



ಲೋಕಿಯ ಶಬ್ದಗಳು ಒಂದೊಂದಾಗಿ ಬಲೂನಿನಂತೆ ಗಾಳಿಯಲ್ಲಿ ತೇಲಿ ತನ್ನತ್ತ ಬರುತ್ತಿವೆ, ಅವುಗಳಲ್ಲಿ ಪ್ರತಿಯೊಂದಕ್ಕೂ ತನ್ನನ್ನು ಎತ್ತಿಕೊಂಡು ಸಾಗುವ ಶಕ್ತಿ ಇದೆ ಎಂದನಿಸತೊಡಗಿತು.

“ಮನಸ್ಸಿಗೆ ಗಾಯ ಅಂದ್ರೆ... ನಾನೇನು ಮಾಡ್ಲಿ?” ಆತ್ಮಾರಾಮನಿಗೆ ಏನು ಕೇಳಬೇಕಂತಲೂ ತಿಳಿಯಲಿಲ್ಲ.

“ಆಫೀಸಿಗೆ ರಜಾ ಹಾಕು, ಅದರೊಟ್ಟಿಗೆ ಹೊರಗಿನ ಜಗತ್ತಿಗೂ ರಜಾ ಹಾಕು. ಹೊರಗಿನ ಗದ್ದಲ ಬಿಟ್ಟು ಒಳಗಿನ ಗದ್ದಲ ಆಲಿಸು. ಅದು ಕಡಿಮೆಯಾದ ಮೇಲೆ ಉಳಿದ ಮಾತು.”

“ಇವತ್ತು ನನ್ನ ಮುಖನೇ ನನಗೆ ಕನ್ನಡಿಯಲ್ಲಿ ಕಾಣಲಿಲ್ಲ ಅಂದರೆ ನಂಬ್ತೀಯಾ ನೀನು?”

“ನಾನು ನಂಬೋದು ಇರ್ಲಿ, ಮೊದಲು ನಿನ್ನನ್ನು ನೀನು ನಂಬು. ಒಂದು ಹೇಳ್ತೀನಿ– ನಿನ್ನ ಈ ಸಮಸ್ಯೆ, ಅದೇ... ಕನ್ನಡಿಯಲ್ಲಿ ನೀನು ಕಾಣದಿರೋದು, ಯಾರೂ ನಿನ್ನನ್ನು ನೋಡುತ್ತಿಲ್ಲ ಎಂದನಿಸೋದು... ಎಲ್ಲ ನಿನ್ನಿಂದಲೇ ಶುರುವಾಗಿರೋದು. ಇಷ್ಟಂತೂ ಖಾತ್ರಿ.”

ಆತ್ಮಾರಾಮನಿಗೆ ಲೋಕಿ ಹೇಳೋದು ಒಂದೂ ಅರ್ಥವಾಗಲಿಲ್ಲ. ಸುಮ್ಮನಿದ್ದ.

“ಈ ಜಗತ್ತು ನಿನ್ನ ಪಾಲಿಗೆ ದೊಡ್ಡದು. ಅದರ ಪಾಲಿಗೆ ನೀನು ಒಂದು ಸಣ್ಣ ಬಿಂದು, ಏನೂ ಅಲ್ಲ. ಹಾಗಾಗಿ ಅದಕ್ಕೆ ನೀನು ಹೇಗೆ ಕಾಣ್ತೆ ಎನ್ನೋದು ಮುಖ್ಯ ಅಲ್ಲ. ನಿನ್ನ ನೋಡಲಿಕ್ಕೆ ಪುರುಸೊತ್ತು ಯಾರಿಗಿದೆ ಹೇಳು? ಬೀದಿ ನಾಯಿ ಬೊಗಳದಿದ್ರೆ ಬದುಕಬಹುದು, ಹುಚ್ಚು ಹಿಡದ್ರೆ ಕೊಂದುಹಾಕ್ತಾರೆ, ಅಷ್ಟೆ.” ಲೋಕಿಯ ದನಿಯಲ್ಲಿ ನೋವು ಕಂಡ ಆತ್ಮಾರಾಮನಿಗೆ ಅವನ ಸಹಾನುಭೂತಿ ನೋಡಿ ಆತ್ಮೀಯತೆ ಮೂಡಿತು.

“ಆದರೆ ಯಾಕೆ ಹೀಗೆ? ಊರಿಗಿಲ್ಲದ್ದು ನನಗೇ ಯಾಕೆ ಅಂತ.” ಆತ್ಮಾರಾಮನ ಗೊಣಗಾಟದ ಮಾತಿಗೆ ಲೋಕಿ, ಥಟ್ಟನೆ “ಬೇರೆಯವರಿಗೆ ಇಲ್ಲ ಅಂತ ನಿನಗೆ ಹೇಗೆ ಗೊತ್ತು? ಒಬ್ಬೊಬ್ಬರದು ಒಂದೊಂದು ತರಹ” ಎಂದಾಗ ಆಶ್ಚರ್ಯವಾಯಿತು. ಸುಮ್ಮನಾದ.

“ಸ್ವಲ್ಪ ದಿನ ಹೋಗಲಿ, ನಿನಗೇ ಗೊತ್ತಾಗುತ್ತೆ. ಏನೂ ಮಾಡಬೇಡ, ನಿನ್ನ ಆ ಕನ್ನಡಿನೇ ನೋಡ್ತಾ ಇರು.”

ಏನೂ ಮಾಡಬಾರದು ಎನ್ನುವುದೊಂದನ್ನು ಬಿಟ್ಟು ಆತ್ಮಾರಾಮನಿಗೆ ಮತ್ತೇನೂ ತಿಳಿಯಲಿಲ್ಲ; ಒಂದು ಸಂಗತಿಯಂತೂ ಆತ್ಮಾರಾಮನಿಗೆ ಮನದಟ್ಟಾಗಿತ್ತು. ತನ್ನ ಮುಂದಿರುವ ಈ ಲೋಕಿ ಹೋಟೆಲಿನಲ್ಲಿ “ಒಂದು ಮಸಾಲೆ, ಒಂದು ಚಾ” ಎಂದು ಕೂಗುವಾಗ ಎಂಟು ವರ್ಷ ಕಣ್ಣಿಗೇ ಬಿದ್ದಿರಲಿಲ್ಲ ಎಂದನಿಸಿ ಬೇಸರವಾಯಿತು.

* * *

ಲೋಕಿಯ ರೂಮಿನಿಂದ ಬಂದ ನಂತರ ಆತ್ಮಾರಾಮನಿಗೆ ಒಂದು ತರಹದ ಆಸೆ, ಅಥವಾ ನಿರಾಸೆಯಲ್ಲಿ ಒಬ್ಬರು ಜೊತೆ ಸಿಕ್ಕಂತಾಯಿತು. ಮುಂದಿನ ಪೂರ್ತಿ ಒಂದು ವಾರವನ್ನು ಅದರ ಗುಂಗಿನಲ್ಲಿಯೇ ಕಳೆದ. ಏನೂ ಮಾಡದಿರುವುದು ಅವನ ದಿನಚರಿಯಾಯಿತು. ಆಫೀಸಿಗೆ ಒಂದು ವಾರ ರಜಾ ಹಾಕಿದ. ರೂಮಿನಲ್ಲಿ ಎಲ್ಲೆಂದರಲ್ಲಿ ಹರಡಿಕೊಂಡು ಬಿದ್ದಿದ್ದ ಸಾಮಾನುಗಳೆಲ್ಲ ಅವನ ಉಮೇದಿನಲ್ಲಿ